**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**
**ಸಿ.ಸಿ. ಸಂಖ್ಯೆಃ 2149/2023**

**ಸಿ.ಡಬ್ಲ್ಯೂ: 1 /ಪಿ.ಡಬ್ಲ್ಯೂಃ 2**
**ಪ್ರಮಾಣೀಕರಿಸಿದ ದಿನಾಂಕಃ 19.3.25**

| | |
|---|---|
| **ಹೆಸರು** | ಸುರೇಶ್ |
| **ತಂದೆಯ ಹೆಸರು** | ತಿಮ್ಮರಾಯಪ್ಪ |
| **ವಯಸ್ಸು** | 35 ವರ್ಷ |
| **ವೃತ್ತಿ** | ಚಾಲಕ |
| **ಸ್ಥಳ** | ತಿಮ್ಮಾಪುರ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಆರೋಪಿ ಪರಿಚಯ.

2. ಸಾಕ್ಷಿಯು ನಿಪಿ1 ರ ಪಂಚನಾಮೆಯ ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ1 ಬಿ ಎಂದು ಗುರುತಿಸಲಾಯಿತು. ದಿಃ3.5.2023 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಅಬಕಾರಿ ಇಲಾಖೆಯ ಜೀಪ್‌ನಲ್ಲಿ ಚಾಲಕನಾಗಿ ಚಾಸಾ6, 7 ರವರ ಜೊತೆ ಕರ್ತವ್ಯ ಮಾಡುತ್ತಿರುತ್ತೇನೆ. ಒಂದು ದ್ವಿ ಚಕ್ರ ವಾಹನದಲ್ಲಿ ಕ್ಯಾಸಂಬಳ್ಳಿ ಇಂದ ಶಾಂತಿಪುರಂ ಗ್ರಾಮಕ್ಕೆ ಒಂದು ಚೀಲ ತೆಗೆದುಕೊಂಡು ಹೋಗುತ್ತಿರುವುದನ್ನು ನೋಡಿ ಚಾಸಾ7 ರವರು ದ್ವಿ ಚಕ್ರ ವಾಹನವನ್ನು ಅಡ್ಡಗಟ್ಟಿ ನಿಲ್ಲಿಸುವಂತೆ ಹೇಳಿದಾಗ ನಾನೂ ಸಹ ದ್ವಿ ಚಕ್ರ ವಾಹನವನ್ನು ನಿಲ್ಲಿಸಿರುತ್ತೇನೆ. ಸದರಿ ದ್ವಿ ಚಕ್ರ ವಾಹನವನ್ನು ಪರಿಶೀಲಿಸಿದಾಗ 25 ಮದ್ಯದ ಪ್ಯಾಕೆಟ್‌ಗಳು ಇರುತ್ತದೆ. ಸದರಿ 25 ಮದ್ಯದ ಪ್ಯಾಕೆಟ್‌ಗಳನ್ನು ವಶಪಡಿಸಿಕೊಂಡು ಚಾಸಾ4 ರವರು ಚಾಸಾ7 ರವರು ಹೇಳಿದಂತೆ ನಿಪಿ1 ರ ಪಂಚನಾಮೆ ಬರೆದಿರುತ್ತಾರೆ. ನಾನು ನಿಪಿ1 ರ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನಿಪಿ1 ರ ಪಂಚನಾಮೆ ಮಾಡುವ ಮೊದಲು ಶೋಧನಾ ವಾರೆಂಟ್, ಮಾದರಿ ನಕಲಿನ ಚೀಟಿ ಮತ್ತು ಲಿಸ್ಟ ಆಫ್ ಅರ್ಟಿಕಲ್ಸ ದಾಖಲೆಗಳನ್ನು ಬರೆದಿರುತ್ತಾರೆ. ನಾನು ಘಟನೆ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

3. ಸಾಕ್ಷಿಯು ನಿಪಿ2 ಮತ್ತು 3 ರ ದಾಖಲೆಯಲ್ಲಿನ ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಸಹಿಗಳನ್ನು ನಿಪಿ2 ಬಿ ಮತ್ತು ನಿಪಿ3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ನಕಲಿನ ಚೀಟಿಯನ್ನು ಮತ್ತು ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಮಾದರಿ ನಕಲಿನ ಚೀಟಿಯನ್ನು ನಿಪಿ4 ಮತ್ತು ಸಹಿಯನ್ನು ನಿಪಿ4 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು. ಮಾ-1 ಅನ್ನು ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

4. ನಾನು ಅಡ್ಡ ಹಾಕಿ ಹಿಡಿದ ದ್ವಿ ಚಕ್ರ ವಾಹನ ಸಂ ಎಪಿ 03 ಎವೈ 4586 ರ ಬಜಾಜ್ ಡಿಸ್ಕವರ್ ವಾಹನ ಎಂದರೆ ಸರಿ.

**ಪಾಟೀ ಸವಾಲುಃ-ಆರೋಪಿ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ-**

5. ನಾನು ತಾತ್ಕಲಿಕವಾಗಿ ಅಬಕಾರಿ ಇಲಾಖೆಯ ಜೀಪ್ ನ ಚಾಲಕನಾಗಿ ಚುನಾವಣಾ ಸಮಯದಲ್ಲಿ ಪೆಬ್ರವರಿ 2023 ರಿಂದ ಏಪ್ರಿಲ್ 2023 ರವರೆಗೂ ಕೆಲಸ ಮಾಡಿರುತ್ತೇನೆ. ನಮಗೆ ಘಟನೆ ಬಗ್ಗೆ ಮಾಹಿತಿ ಬರುವ ಸಮಯದಲ್ಲಿ ಕ್ಯಾಸಂಬಳ್ಳಿಯಲ್ಲಿರುತ್ತೇವೆ. ಕ್ಯಾಸಂಬಳ್ಳಿ ಇಂದ ಘಟನಾ ಸ್ಥಳಕ್ಕೆ 10 ಕಿ ಮಿ ಅಂತರವಿದೆ. ಕ್ಯಾಸಂಬಳ್ಳಿಯಿಂದ ಮದ್ಯಾಹ್ನ 3.45 ಕ್ಕೆ ಬಿಟ್ಟು ಘಟನಾ ಸ್ಥಳಕ್ಕೆ 4.50 ಕ್ಕೆ ಹೋಗಿರುತ್ತೇವೆ. ನಾನು ಚಾಲನೆ ಮಾಡುತ್ತಿದ್ದ ಅಬಕಾರಿ ಜೀಪ್ ನ ಸಂ ಕೆಎ 08 ಜಿ 161 ಆಗಿರುತ್ತದೆ. ನನ್ನನ್ನು ಮತ್ತು ಅಬಕಾರಿ ಪೊಲೀಸರನ್ನು ಬಿಟ್ಟು ಸ್ಥಳದಲ್ಲಿ 3 ಜನ ಸ್ಥಳೀಯರು ಇರುತ್ತಾರೆ. ನಾನು ಸಹಿ ಮಾಡಿದ ನಿಪಿ1 ರ ಪಂಚನಾಮೆಯಲ್ಲಿ ಸ್ಥಳೀಯರು ಸಹಿ ಮಾಡಿಲ್ಲ. ನಾನು ಹೇಳಿದಂತೆ ಘಟನಾ ಸ್ಥಳಕ್ಕೆ ಹೋಗಿ ಯಾವುದೇ ಮದ್ಯದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ7 ರವರು ನಿಪಿ1 ರ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಎಂಒ 1 ರ ರೀತಿಯಲ್ಲಿರುವ ಪ್ಯಾಕೆಟ್ ಗಳು ಸಾಮಾನ್ಯವಾಗಿ ಎಲ್ಲ ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.